# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂ. 769/2015

ಸಿಡಬ್ಲ್ಯೂ- 3 ಪಿಡಬ್ಲ್ಯೂ-3

ಹೆಸರುಃ ಪರಮೇಶ್ವರ್

ತಂದೆ ಹೆಸರುಃ ಚಂದ್ರ ಶೇಖರ್

ವಯಸ್ಸುಃ 38 ವರ್ಷ

ಉದ್ಯೋಗಃ ವ್ಯಾಪಾರ

ವಾಸ ಸ್ಥಳಃ ಸೇಡಂ

ದಿನಾಂಕ 19-06-2024

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ, ಸದರಿ ದಾಖಲೆ ಗುನ್ಹಾ ಸ್ಥಳ ಪಂಚನಾಮೆಯಾಗಿದ್ದು, ದಾಖಲೆಯ ಮೇಲೆ ಸಾಕ್ಷಿಯ ಸಹಿ ಇದ್ದು ಸಾಕ್ಷಿ ಸದರಿ ಸಹಿಯನ್ನು ಗುರುತಿಸಿದ ಮೇರೆಗೆ ದಾಖಲೆಯನ್ನು ನಿ ಪಿ1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಸಹಿಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು ಸಂಜೆ 06-00 ಗಂಟೆಗೆ ದಿನಾಂಕ 21-09-2015 ರಂದು ಮಾಡಿದ್ದೆನು. ಅಪಘಾತದ ಸ್ಥಳದಲ್ಲಿ ಪೋಲೀಸ್ ರವರು ನನ್ನ ಸಮಕ್ಷಮದಲ್ಲಿ ಪಂಚನಾಮೆ ಮಾಡಿರುತ್ತಾರೆ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ, ಸದರಿ ದಾಖಲೆಯನ್ನು ಶವದ ಪಂಚನಾಮೆಯಾಗಿದ್ದು ಸದರಿ ದಾಖಲೆಯನ್ನು ಸಾಕ್ಷಿ ಒಪ್ಪಿದ ಮೇರೆಗೆ ನಿ ಪಿ 2 ಎಂದು ಗುರುತಿಸಲಾಗಿ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಮೇಲೆ ನಾನು ಸಂಜೆ 06-00 ಗಂಟೆಗೆ ಸರ್ಕಾರಿ ಆಸ್ಪತ್ರೆಯಲ್ಲಿ ದಿ. 21-09-2015 ರಂದು ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸ.ಸ.ಅ.ರವರು ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿ.21-09-2015 ರಂದು ಬೆಳ್ಳಿಗ್ಗೆ 10-00 ರಿಂದ 11-00 ಗಂಟೆಗೆ ರಾಜ್ಯ ಹೆದ್ದಾರಿ ಸಂಖ್ಯೆ-10 ರ ಸೇಡಂ ಹೈದ್ರಾಬಾದ್ ಪಟ್ಟಣದ ಹತ್ತಿರ ಅಪಘಾತ ವಾಗಿದ್ದು ಅಪಘಾತ ಸ್ಥಳಕ್ಕೆ ಪೋಲೀಸರು ನನ್ನನ್ನು ಪಂಚರನ್ನಾಗಿ ಬರಮಾಡಿಕೊಂಡಿದ್ದರು. ಸದರಿ ಸ್ಥಳದಲ್ಲಿ ಒಂದು ಮೋಟಾರು ಸೈಕಲ್ ನಂ. ಕೆ ಎ 34/ವಿ -4108 ನನ್ನ ಸಮಕ್ಷಮದಲ್ಲಿ ಪೋಲೀಸರು ಜಪ್ತು ಪಡಿಸಿಕೊಂಡಿರುತ್ತಾರೆ.

**ಪಾಟಿ ಸವಾಲು ಶ್ರೀ ಎ ಎಂ ಆರೋಪಿ ಪರ ವಕೀಲರಿಂದ–**

ನಾನು ಸೇಡಂ ನಲ್ಲಿಯೇ ಇರುತ್ತೇನೆ. ಗುನ್ನಾ ಸ್ಥಳ ರಾಜ್ಯ ಹೆದ್ದಾರಿ ಸಂಖ್ಯೆ 10 ತುಂಬಾ ವಾಹನ ಸಂಚರಿಕೆ ಇರುತ್ತದೆ ಎಂದರೆ ಸರಿ. ಗುನ್ನಾ ಸ್ಥಳದಿಂದ ಸುಮಾರು 10 ಮಿ. ಮುಂದೆ ಎಡಗಡೆ ರಸ್ತೆ ಗಣೇಶ ನಗರಕ್ಕೆ ಮತ್ತು ಬಲಗಡೆ ರಸ್ತೆ ಹೂಡಗಿಗೆ ಹೋಗುತ್ತದೆ ಎಂದರೆ ಸರಿ. ಗುನ್ನಾ ಸ್ಥಳದ ಹತ್ತಿರ ಆಕಾಶ್ ಡಾಬಾ ಇರುತ್ತದೆ ಮತ್ತು ಹಿರೋಹೋಂಡಾ ಶೋರೂಂ ಇದಿದ್ದರಿಂದ ವಾಹನ ಸಂಚಾರ ಮತ್ತು ಜನ ಸಂದಣಿ ಹೆಚ್ಚಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಅದೇ ದಾರಿಯಲ್ಲಿ ವಾಹನಗಳು ರಬಸದಿಂದ ಚಲಿಸುವುದಿಲ್ಲ ಎಂದರೆ ಸರಿ. ಗುನ್ನಾ ಸ್ಥಳದಿಂದ ಸ್ವಲ್ಪ ಮುಂದೆ ದಿಬ್ಬ ಹಾಕಿದ್ದಾರೆ ಎಂದರೆ ಸರಿ. ಮೃತ ವ್ಯಕ್ತಿ ನನಗೆ ಅಳಿಯ ಆಗಬೇಕು. ನಿ ಪಿ 1 ರಲ್ಲಿ ಬರೆದಿರುವ ಸಂಗತಿಗಳು ನನಗೆ ತಿಳಿಸಿರುವುದಿಲ್ಲ. ಪೋಲೀಸರ ಹೇಳಿಕೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ದಿ. 21-09-2015 ರಂದು ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಗುನ್ನಾ ಸ್ಥಳ ಪಂಚನಾಮೆ ಮಾಡಿರುವುದಿಲ್ಲ ಮತ್ತು ಶವ ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಳಿಯ ತೀರಿ ಹೋದ ಕಾರಣ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯನ್ನು ನಾನು ನೋಡಿರುವುದಿಲ್ಲ. ಹಾಗೇ ಗುನ್ನಾ ಸ್ಥಳದಲ್ಲಿ ಪಂಚನಾಮ ಮಾಡುವ ಕಾಲಕ್ಕೆ ಪೊಲೀಸರು ವಾಹನ ಜಪ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣಕ್ಕೂ ಆರೋಪಿಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಪಂಚನಾಮ ಮಾಡುವ ಕಾಲಕ್ಕೆ ,ಯಾರು ಯಾರು ಇದ್ದರೂ, ಯಾವ ದಿನಾಂಕ, ಯಾರ ಸಮಕ್ಷಮ, ಯಾವದಕೊಸ್ಕರ ಮಾಡಿದ್ದರು ಎಂದು ಹೇಳಲು ಬರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಪ್ರ.ದ.ನ್ಯಾದಂ.ಸೇಡಂ.

Accused is present. Learned APP is present. Counsel for accused is present. CW-3 is present. And examined as PW-3 and got marked Ex. P-1 and P-2. Counsel for accused cross examined fully PW-3. Reissue WS to CW-1, 2, 7. Call on 24-07-2024

**JMFC**., **Sedam**.